ಅಪರ  ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ. 3810/2022

ಸಿ.ಡಬ್ಲ್ಯೂ-05
ಪಿ.ಡಬ್ಲ್ಯೂ-05

**ಸಾಕ್ಷಿಗೆ ದಿಃ 05.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ H.B.Y. ವಕೀಲರಿಂದಃ**

ಚಾಸಾ 1 ರಿಂದ 4 ನಮ್ಮ ಸಂಬಂಧಿಕರು ಮತ್ತು ನಮ್ಮ ಊರಿನವರು ಆಗಿರುತ್ತಾರೆ. ಚಾಸಾ 7,8 ಮತ್ತು 10 ನಮ್ಮ ಊರಿನವರು ಆಗಿದ್ದು ನನ್ನ ಸಂಬಂಧಿಗಳು ಆಗಿರುತ್ತಾರೆ. ನ್ಯಾಯಾಲಯದ ಹೊರಗಡೆ ಚಾಸಾ 2 ಇರುತ್ತಾರೆ. ಅವರೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ಬೆಂಗಳೂರಿನಲ್ಲಿ ನನ್ನ ಮಗನೊಂದಿಗೆ ವಾಸವಾಗಿರುತ್ತೇನೆ. ನಾನು ಈಗ 1 ವರ್ಷದಿಂದ ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದೇನೆ. ನನ್ನ ಜಮೀನಿನ ಸರ್ವೆ ನಂ ನನಗೆ ಗೊತ್ತಿಲ್ಲ. ನನಗೆ ವಯಸ್ಸಾಗಿದ್ದರಿಂದ ಏನು ಕೆಲಸ ಮಾಡಲು ಆಗುವುದಿಲ್ಲವೆಂದರೆ ಸರಿಯಲ್ಲ.

ಚಾಸಾ 7 ಅವರ ಜಮೀನಿನ ಸರ್ವೆ ನಂ ನನಗೆ ಗೊತ್ತಿಲ್ಲ. ಆರೋಪಿ 1 ಕೋಳಿ ಫಾರಂ ಅನ್ನು ಮಾಡಿರುತ್ತಾರೆ ಎಂದರೆ ಸರಿ. ಅವರು ಕೋಳಿ ಫಾರಂನಲ್ಲಿ ಕೋಳಿ ಮತ್ತು ಮರಿಗಳನ್ನು ಇಳಿಸಲು ಅಲ್ಲಿ ಓಡಾಡುತ್ತಾರೆ  ಎಂದರೆ ಸರಿ. ಆರೋಪಿತರಿಗೂ ಚಾಸಾ 2 ಮತ್ತು 7 ಅವರಿಗೆ ಮೊದಲಿನಿಂದ ಅಷ್ಟಕ್ಕಷ್ಟೇ ಎಂದರೆ ಸರಿ. ಗಲಾಟೆ ಆದ ಜಾಗ ಹಟ್ಟಿ ಜಾಗ ಎಂದರೆ ಸರಿಯಲ್ಲ. ನಾನು ಜಾಗದ ದಾಖಲೆಗಳನ್ನು ನೋಡಿರುವುದಿಲ್ಲ.  ಗಲಾಟೆ ಆದ ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆ. ನಾವು ಬೆಳಿಗ್ಗೆ ಜಮೀನಿನ ಬಳಿ ಹೋಗಿದ್ದು ಗಲಾಟೆ ಶಬ್ದ ಕೇಳಿ ಸ್ಥಳಕ್ಕೆ ಹೋಗಿರುತ್ತೇನೆಂದು ಹೇಳುತ್ತಾರೆ. ನಾನು ಜಮೀನನ್ನು ಬಿಟ್ಟು ಬಂದಾಗ 12 ಗಂಟೆ ಸಮಯವಾಗಿತ್ತು.

ಬೋರಮ್ಮಾ ಮತ್ತು ನಾನು ಒಂದೇ ಜಮೀನಿನಲ್ಲಿದ್ದೇವು. ಅವರ ಜಮೀನಿನ ಸರ್ವೆ ನಂ ನನಗೆ ಗೊತ್ತಿಲ್ಲ. ಸ್ಥಳದಲ್ಲಿ ನೀರಿನ ತೊಟ್ಟಿ ಮತ್ತು ಮನೆ ಇರಲಿಲ್ಲ ಚಾಸಾ 7 ನನ್ನ ಸಂಬಂಧಿ ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಆರೋಪಿ 1 ರಿಂದ 6 ಅವರ ಕೈಯಲ್ಲಿ ಕಲ್ಲುಗಳು ಇದ್ದವು. ನನಗೆ ವಿಷಯವನ್ನು ಯಾರು ತಿಳಿಸಿರುವುದಿಲ್ಲ ನಾನೆ ಶಬ್ದ ಕೇಳಿ ಬಂದಿರುತ್ತೇನೆ. ಊರಿನಿಂದ ಘಟನಾ ಸ್ಥಳ ಸ್ವಲ್ಪ

ದೂರು ಆಗುತ್ತದೆ. ಗಲಾಟೆ ಸಮಯದಲ್ಲಿ ಊರಿನ ಜನ ಯಾರು ಸೇರಿರುವುದಿಲ್ಲ. ಸ್ಥಳದಲ್ಲಿ 8 ಜನ ಮತ್ತು ಆರೋಪಿತರ ಮನೆಯ 3 ಜನ ಇದ್ದರು ಎಂದು ಹೇಳುತ್ತಾರೆ. ಅವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಸ್ಥಳಕ್ಕೆ ಯಾವುದೇ ಜೆ.ಸಿ.ಬಿ ಬಂದಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ರೌಡಿಗಳು ಇದ್ದರೆಂದು ಮುಖಕ್ಕೆ ಬಟ್ಟೆ ಹಾಕಿಕೊಂಡಿದ್ದರಿಂದ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಅವರು ಸಹ ಜೆ.ಸಿ.ಬಿ ಯಿಂದ ಮನೆಯನ್ನು ಕೆಡವಿ ದೂರ ದೂರ ಇದ್ದರು. ಈ ಸಂಬಂದ ನಾನು ಪೋಲಿಸ ಠಾಣೆಗೆ ಹೋಗಿರುವುದಿಲ್ಲ. ನಾನು ಹೇಳಿದ ರೀತಿ ಯಾವುದೆ ಘಟನೆ ನಡೆದಿರುವುದಿಲ್ಲ ಚಾಸಾ 7 ನನ್ನ ಸಂಬಂಧಿ ಆಗಿರುವ ಕಾರಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಚಾಸಾ 2 ಮತ್ತು 7 ಅವರಿಗೆ ಮೊದಲಿನಿಂದಲೂ ದ್ವೇಷ ಇದ್ದ ಕಾರಣ ಸುಳ್ಳು ದೂರನ್ನು ನೀಡಿಸಿರುತ್ತೇನೆಂದರೆ ಸರಿಯಲ್ಲ. ಮು. ಮಾ. ಗೂ ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ. ಯಾರು ಕೂಡ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಘಟನಾ ಸ್ಥಳ ಹಟ್ಟಿ ಜಾಗ ಆಗಿದ್ದು ಸದರಿ ಜಾಗದಲ್ಲಿ ತೋಟ್ಟಿ ಮತ್ತು ಮನೆ ಇರಲಿಲ್ಲವೆಂದರೆ ಸರಿಯಲ್ಲ. ಘಟನೆ ಆದ ಸಮಯದಲ್ಲಿ ನಾನು ಬೆಂಗಳೂರಿನಲ್ಲಿದ್ದು ಸ್ಥಳದಲ್ಲಿ ಇರಲಿಲ್ಲವೆಂದರೆ ಸರಿಯಲ್ಲ. ಘಟನೆ ಆದ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.